DS – 1456

# V Semester B.Com. Examination, November/December 2009
## (Semester Scheme)
## COMMERCE
## Paper 5.2 : Income Tax – I

Time : 3 Hours

Max. Marks : 90

***Instruction** : Answers should be written completely either in **Kannada** or in **English**.*

SECTION – A

Answer **any ten** sub-questions. **Each** question carries **two** marks. **(10×2=20)**

1. a) Give the meaning of income tax.

b) State the various heads of income.

c) Define Previous Year.

d) Who is "Assessee in default" ?

e) What is agricultural income ? Give an example.

f) What is capital receipt ? Give an example.

g) State any four fully exempted incomes.

P.T.O.

h) What is advance salary ? How is it treated ?

i) What is meant by an allowance ?

j) What is meant by perquisite ?

k) Give the meaning of municipal value.

l) What is meant by composite rent ?

SECTION – B

Answer **any five** questions. **Each** question carries **five** marks. **(5×5=25)**

2. State the situations where the income of a previous year is taxed in the same previous year.

3. Briefly explain the tax treatment of leave encashment.

4. Briefly explain the tax treatment of RPF and SPF.

5. Mr. Ramesh, a citizen of America, comes to India for the first time on 20-03-2008. On 01-09-2008 he leaves India for Nepal on a business trip. He comes back on 26-02-2009. Determine his residential status for the AY 2009-10.

6. Ms. Bhoomika resides in Kolkata. During the PY 2008-09 she gets Rs. 12,000 p.a. as basic salary. She gets DA at 20% of basic salary (enters for retirement benefits). She has also received a commission of Rs. 15,000 (calculated at 2% on turnover achieved by her). HRA received by her is Rs. 11,800 p.a. but rent paid is Rs. 14,800 p.a. Calculate the taxable HRA for the AY 2009-10.

7. Mr. Chandrashekar retires from LMN Ltd., on 30-06-2008. He gets pension of Rs. 2,000 p.m. upto 31-01-2009. With effect from 01-02-2009 he gets 60% of pension commuted for Rs. 40,800. Determine the taxable pension of Mr. Chandrashekar for the AY 2009-10 assuming that he is also receiving gratuity.

8. Calculate the Gross Annual Value from the following details :

Municipal Value Rs. 61,000; Fair Rental Value Rs. 66,000; Standard Rent Rs. 59,000; Annual Rent Rs. 57,000 and Vacancy Period $1\frac{1}{2}$ months.

9. Mrs. Savitha started construction of her house on 07-06-2005 and took housing loan of Rs. 6,00,000 at 12% per annum on 01-07-2006. The construction of house was completed on 22-06-2008 and was let out from 01-07-2008 on a monthly rent of Rs. 7,500. You are required to calculate the amount of interest that can be claimed as deduction U/S 24 assuming that entire amount of loan was outstanding during the PY 2008-09.

## SECTION – C

Answer **any three** questions. **Each** question carries **fifteen** marks. (3×15=45

10. Mr. Krishna Murthy furnishes the following particulars of his income for the PY 2008-09 :

    a) Interest on German Development Bonds Rs. 60,000 ( $2/5^{th}$ is received in India).

    b) Income from agriculture in Bangladesh (received there but later on Rs. 50,000 remitted to India) Rs. 1,80,000.

    c) Income from property in Sri Lanka received there (Rs. 80,000 is used in Sri Lanka and the balance remitted to India) Rs. 1,20,000.

    d) Income from business in Kenya which is controlled from Bengaluru (Rs. 18,000 received in Bengaluru) Rs. 78,000.

    e) Dividend paid by an Indian Company received in Canada Rs. 56,000.

    f) Past untaxed profit Rs. 1,05,000 brought to India during 2008-09.

    g) Profit from business in Mysore but controlled from London Rs. 72,000.

    h) Profit on sale of building in Mangalore but received in Dubai Rs. 1,48,000.

    i) Pension from Indian Company received in London Rs. 36,000.

    j) Gift in cash from a relative received in India Rs. 60,000.

Find out Mr. Krishna Murthy's Gross Total Income for the AY 2009-10 if he is :

a) Resident and ordinarily resident

b) Resident but not ordinarily resident and

c) Non-resident.

11. Mr. Prabhakar is an employee of NSK Ltd., Bengaluru. Particulars of his income for the PY 2008-09 are as follows :

Basic salary Rs. 13,500 p.m. DA 35% of basic salary (60% of it forms part of salary for retirement benefits). HRA Rs. 4,000 per month (rent paid Rs. 5,000 per month) Children education allowance Rs. 50 per month per child for 3 children. Helper allowance Rs. 300 per month (Actual amount spent Rs. 200 per month) Bonus Rs. 25,000. Leave encashment Rs. 13,500. Advance salary of April 2009 Rs. 14,000. Entertainment allowance Rs. 250 per month.

Mr. Prabhakar has been provided with free use of a small car for both official and personal use. During the year the company reimbursed Rs. 19,200 towards medical expenses incurred by him.

His contribution to RPF is 14% of salary and the company also makes a matching contribution. Interest credited by the company on the accumulated balance of RPF account at 12% p.a. amounts to Rs. 18,000.

Professional tax paid by him is Rs. 200 per month.

Compute Mr. Prabhakar's salary income for the AY 2009-10.

12. Smt. Rekha, an employee of RKS Ltd., Delhi receives the following incomes during the year ending 31-03-2009.

Basic salary upto 31-08-2008 Rs. 12,000 per month and thereafter at Rs. 12,500 per month. Leave travel concession Rs. 4,500 (entire amount spent). Dearness pay Rs. 30,000; Dearness Allowance Rs. 15,000 (it does not enter for retirement benefits); Children Education Allowance Rs. 250 per month for 1 child. Reimbursement of medical expenses Rs. 31,500 (Private Hospital).

Smt. Rekha has been provided with rent free flat at Delhi (rent paid by the company Rs. 80,000 per annum), facility of a watchman and a cook (each of whom is paid a salary of Rs. 700 per month), interest free loan for purchasing home appliances Rs. 1,20,000 (date of loan borrowed 01-04-08 and SBI lending rate for similar loan on 01-04-08 is 12% p.a.).

Determine Smt. Rekha's salary income for the AY 2009-10 assuming that she has paid Rs. 200 per month as professional tax.

13. Smt. Indira owns 4 houses. HP1 is let out for business purpose, HP2 is occupied for own business and HP3 and HP4 are occupied for own residence. Following particulars are available with respect to these properties for the PY 2008-09.

| **Particulars** | **HP1** | **HP2** | **HP3** | **HP4** |
|---|---|---|---|---|
| Municipal Value | 60,000 | 10,000 | 1,36,000 | 1,90,000 |
| Fair Rental Value | 78,000 | 36,000 | 1,54,000 | 1,90,000 |
| Standard Rent | 72,400 | 24,000 | 1,50,000 | 1,80,000 |
| Annual Rent | 84,000 | - | - | - |
| Unrealised Rent | 7,000 | - | - | - |
| Municipal tax - | | | | |
| paid by owner | 3,000 | 8,000 | 12,000 | 16,000 |
| paid by tenant | 3,000 | - | - | - |
| Date of completion of construction | 31-05-07 | 31-05-07 | 31-03-07 | 01-04-05 |

Smt. Indira had borrowed Rs. 6,00,000; Rs. 8,00,000 and Rs. 13,00,000 respectively for the construction of HP1, HP3 and HP4. Date of borrowing of all loans is June 16, 2003 and repayment of all loans along with interest is 31-12-2007. During this period entire loan amount was outstanding. Rate of interest on all loans is 15% p.a. Determine Smt. Indira's income from house property for the AY 2009-10.

14. Smt. Veena is the owner of a house property in Bengaluru completely let out for residential purpose consisting of 2 flats of different sizes. They are let out at Rs. 5,000 p.m. and Rs. 10,000 p.m. respectively. The municipal value of the house is Rs. 1,50,000. The rate of municipal tax is 10% which was paid by her. The other particulars of the house are as under :

a) The construction of the house was completed on 10-01-2005.

b) A loan of Rs. 1,00,000 was taken on 1-4-2001 at 12% p.a.

c) The second flat remained vacant for 2 months during the previous year 2008-09.

d) The loan was fully repaid on 31-12-2008.

e) The average outstanding loan amount for the period from 1-4-2008 to 31-12-2008 was Rs. 20,000.

Determine the income from house property of Smt. Veena for the AY 2009-10.

## ಕನ್ನಡ ಆವೃತ್ತಿ

### ವಿಭಾಗ - ಎ

ಯಾವುದಾದರೂ ಹತ್ತು ಉಪಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೂ ಎರಡು ಅಂಕಗಳು. **(10×2=20)**

1. a) ಆದಾಯ ತೆರಿಗೆಯ ಅರ್ಥವನ್ನು ನೀಡಿ.

b) ವಿವಿಧ ಆದಾಯ ಮೂಲಗಳನ್ನು ಹೆಸರಿಸಿ.

c) ಆದಾಯ ವರ್ಷವನ್ನು ವ್ಯಾಖ್ಯಾನಿಸಿ.

d) ತಪ್ಪಿತಸ್ತ ತೆರಿಗೆದಾರ ಎಂದರೆ ಯಾರು ?

e) ಕೃಷಿ ಆದಾಯ ಎಂದರೇನು ? ಒಂದು ಉದಾಹರಣೆ ಕೊಡಿ.

f) ಬಂಡವಾಳ ಸ್ವೀಕೃತಿ ಎಂದರೇನು ? ಒಂದು ಉದಾಹರಣೆ ಕೊಡಿ.

g) ಯಾವುದಾದರೂ ನಾಲ್ಕು ಸಂಪೂರ್ಣ ತೆರಿಗೆ ಮುಕ್ತ ಆದಾಯಗಳನ್ನು ಹೆಸರಿಸಿ.

h) ಮುಂಗಡ ವೇತನ ಎಂದರೇನು ? ಅದನ್ನು ಹೇಗೆ ಪರಿಗಣಿಸುವಿರಿ ?

i) ಭತ್ಯೆ ಎಂಬುದರ ಅರ್ಥವೇನು ?

j) ಸೌಲಭ್ಯ ಎಂಬುದರ ಅರ್ಥವೇನು ?

k) ಪೌರಾಡಳಿತ ಮೌಲ್ಯದ ಅರ್ಥವನ್ನು ನೀಡಿ.

l) ಸಂಯುಕ್ತ ಬಾಡಿಗೆ ಎಂಬುದರ ಅರ್ಥವೇನು ?

**ವಿಭಾಗ - ಬಿ**

ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ ಐದು ಅಂಕಗಳು. **(5×5=25)**

2. ಆದಾಯ ವರ್ಷದ ಆದಾಯಗಳ ಮೇಲೆ ಆದಾಯ ವರ್ಷದಲ್ಲಿಯೇ ತೆರಿಗೆ ವಿಧಿಸುವ ಸಂದರ್ಭಗಳನ್ನು ಹೆಸರಿಸಿ.

3. ಗಳಿಕೆ ರಜೆ ನಗದೀಕರಣವನ್ನು ತೆರಿಗೆಗಾಗಿ ಯಾವ ರೀತಿ ಪರಿಗಣಿಸಬೇಕು ಎಂಬುದನ್ನು ಸಂಕ್ಷಿಪ್ತವಾಗಿ ವಿವರಿಸಿ.

4. RPF ಮತ್ತು SPF ಗಳನ್ನು ತೆರಿಗೆಗಾಗಿ ಯಾವ ರೀತಿ ಪರಿಗಣಿಸಬೇಕು ಎಂಬುದನ್ನು ಸಂಕ್ಷಿಪ್ತವಾಗಿ ವಿವರಿಸಿ.

5. ರಮೇಶ್ ಎಂಬ ಒಬ್ಬ ಅಮೇರಿಕ ಪ್ರಜೆ, ದಿನಾಂಕ 20-03-2008 ರಂದು ಮೊದಲ ಬಾರಿಗೆ ಭಾರತಕ್ಕೆ ಆಗಮಿಸುತ್ತಾರೆ. ದಿನಾಂಕ 01-09-2008 ರಂದು ಅವರು ಭಾರತದಿಂದ ನೇಪಾಳಕ್ಕೆ ವ್ಯಾಪಾರದ ಉದ್ದೇಶಕ್ಕಾಗಿ ತೆರಳುತ್ತಾರೆ. ದಿನಾಂಕ 26-02-2009 ರಂದು ವಾಪಸ್ ಬರುತ್ತಾರೆ. ಕರವರ್ಷ 2009-10 ಕ್ಕೆ ಅವರ ನಿವಾಸಿ ಸ್ಥಾನಮಾನವನ್ನು ನಿಶ್ಚಯಿಸಿ.

6. ಭೂಮಿಕ ಎಂಬುವವರು ಕೋಲ್ಕತ್ತದಲ್ಲಿ ವಾಸಿಸುತ್ತಾರೆ. ಆದಾಯ ವರ್ಷ 2008-09 ರಲ್ಲಿ ಅವರು ವಾರ್ಷಿಕ ರೂ. 12,000 ವನ್ನು ಮೂಲ ವೇತನವಾಗಿ ಪಡೆಯುತ್ತಾರೆ. ಮೂಲ ವೇತನದ 20% ಅನ್ನು ತುಟ್ಟಿ ಭತ್ಯೆಯಾಗಿ ಪಡೆಯುತ್ತಾರೆ (ನಿವೃತ್ತಿ ಸೌಲಭ್ಯಗಳಿಗೆ ಸೇರುತ್ತದೆ). ಅವರು ರೂ. 15,000 ದಲ್ಲಾಳಿಯನ್ನು ಸ್ವೀಕರಿಸಿದ್ದಾರೆ (ವಹಿವಾಟಿನ ಮೇಲೆ 2% ನಂತೆ ಲೆಕ್ಕಾಚಾರ ಮಾಡಲಾಗಿದೆ). ಮನೆ ಬಾಡಿಗೆ ಭತ್ಯೆ ವಾರ್ಷಿಕ ರೂ. 11,800 ಪಡೆದುಕೊಂಡಿದ್ದು ವಾರ್ಷಿಕ ರೂ. 14,800 ಬಾಡಿಗೆಯನ್ನು ಪಾವತಿಸಿದ್ದಾರೆ. ಕರವರ್ಷ 2009-10 ಕ್ಕೆ ತೆರಿಗೆಗೆ ಒಳಪಡುವ ಮನೆ ಬಾಡಿಗೆ ಭತ್ಯೆಯನ್ನು ಲೆಕ್ಕ ಹಾಕಿ.

7. ಶ್ರೀ ಚಂದ್ರಶೇಖರ್ ದಿನಾಂಕ 30-06-2008 ರಂದು LMN Ltd., ನಿಂದ ನಿವೃತ್ತರಾಗುತ್ತಾರೆ. ದಿನಾಂಕ 31-01-2009 ರವರೆಗೆ ರೂ. 2,000 ಮಾಸಿಕ ಪಿಂಚಣಿ ಪಡೆಯುತ್ತಾರೆ. ದಿನಾಂಕ 01-02-2009 ರಿಂದ ಜಾರಿಯಾಗುವಂತೆ ಪಿಂಚಣಿಯ 60% ಭಾಗವನ್ನು ರೂ. 40,800 ಗಳಿಗೆ ಪರಿವರ್ತಿತಗೊಳಿಸಿಕೊಳ್ಳುತ್ತಾರೆ. ಶ್ರೀ ಚಂದ್ರಶೇಖರ್ ಗ್ರ್ಯಾಚುಯಿಟಿಯನ್ನು ಪಡೆಯುತ್ತಿದ್ದಾರೆಂದು ಭಾವಿಸಿ ಕರವರ್ಷ 2009-10 ಕ್ಕೆ ತೆರಿಗೆಗೆ ಒಳಪಡುವ ಪಿಂಚಣಿ ಮೊತ್ತವನ್ನು ನಿಶ್ಚಯಿಸಿ.

8. ಕೆಳಕಂಡ ವಿವರಗಳಿಂದ ಸ್ಥೂಲ ವಾರ್ಷಿಕ ಆದಾಯವನ್ನು ಲೆಕ್ಕ ಮಾಡಿ.

ಪೌರಾಡಳಿತ ಮೌಲ್ಯ ರೂ. 61,000; ನಿಷ್ಪಕ್ಷಪಾತ ಬಾಡಿಗೆ ಮೌಲ್ಯ ರೂ. 66,000; ನಿಗದಿತ ಮೌಲ್ಯ ರೂ. 59,000; ವಾರ್ಷಿಕ ಬಾಡಿಗೆ ರೂ. 57,000 ಮತ್ತು ಮನೆ ಖಾಲಿ ಇರುವ ಅವಧಿ $1\frac{1}{2}$ ತಿಂಗಳು.

9. ಶ್ರೀಮತಿ ಸವಿತರವರು ದಿನಾಂಕ 07-06-2005 ರಂದು ಗೃಹ ನಿರ್ಮಾಣವನ್ನು ಪ್ರಾರಂಭಿಸಿ ರೂ. 6,00,000 ಗೃಹ ಸಾಲವನ್ನು ದಿನಾಂಕ 01-07-2006 ರಂದು ವಾರ್ಷಿಕ 12% ಬಡ್ಡಿದರದಲ್ಲಿ ತೆಗೆದುಕೊಂಡಿರುತ್ತಾರೆ. ಗೃಹ ನಿರ್ಮಾಣವು ದಿನಾಂಕ 22-06-2008 ರಂದು ಪೂರ್ಣಗೊಂಡಿದ್ದು ದಿನಾಂಕ 01-07-2008 ರಿಂದ ಮಾಸಿಕ ರೂ. 7,500 ಬಾಡಿಗೆಗೆ ನೀಡಲಾಗಿದೆ. ಆದಾಯ ವರ್ಷ 2008-09 ರಲ್ಲಿ ಸಂಪೂರ್ಣ ಸಾಲವು ಬಾಕಿಯಿರುವುದಾಗಿ ಭಾವಿಸಿ ಸೆಕ್ಷನ್ 24 ರನ್ವಯ ಕೋರಬಹುದಾದ ಬಡ್ಡಿ ಕಡಿತದ ಮೊತ್ತವನ್ನು ನೀವು ಲೆಕ್ಕಾಚಾರ ಮಾಡಿಕೊಡಬೇಕಾಗಿದೆ.

## ವಿಭಾಗ – ಸಿ

ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೂ ಹದಿನೈದು ಅಂಕಗಳಿವೆ. **(3×15=45)**

10. ಶ್ರೀ ಕೃಷ್ಣಮೂರ್ತಿಯವರು ಆದಾಯ ವರ್ಷ 2008-09 ಕ್ಕೆ ಸಂಬಂಧಿಸಿದಂತೆ ಕೆಳಕಂಡ ವಿವರಗಳನ್ನು ನೀಡಿದ್ದಾರೆ.

    a) ಜರ್ಮನ್ ಡೆವಲಪ್‌ಮೆಂಟ್ ಬಾಂಡ್‌ಗಳ ಮೇಲೆ ಬಡ್ಡಿ ರೂ. 60,000 ($2/5$ ರಷ್ಟನ್ನು ಭಾರತದಲ್ಲಿ ಸ್ವೀಕರಿಸಲಾಗಿದೆ).

    b) ಬಾಂಗ್ಲಾದೇಶದಿಂದ ಕೃಷಿ ಆದಾಯ ರೂ. 1,80,000 (ಅಲ್ಲಿಯೇ ಸ್ವೀಕರಿಸಿ ತದನಂತರ ರೂ. 50,000 ಅನ್ನು ಭಾರತಕ್ಕೆ ಪಾವತಿಸಲಾಗಿದೆ).

    c) ಶ್ರೀಲಂಕಾದಲ್ಲಿನ ಆಸ್ತಿಯಿಂದ ಬಂದ ಆದಾಯ ಅಲ್ಲಿಯೇ ಸ್ವೀಕರಿಸಿರುವುದು ರೂ. 1,20,000 (ರೂ. 80,000 ಅನ್ನು ಶ್ರೀಲಂಕಾದಲ್ಲಿಯೇ ಉಪಯೋಗಿಸಿ ಉಳಿದದ್ದನ್ನು ಭಾರತಕ್ಕೆ ಪಾವತಿಸಲಾಗಿದೆ).

    d) ಬೆಂಗಳೂರಿನಿಂದ ನಿಯಂತ್ರಿಸಲ್ಪಡುತ್ತಿರುವ ಕೀನ್ಯಾದಲ್ಲಿನ ವ್ಯಾಪಾರದಿಂದ ಬಂದ ಆದಾಯ ರೂ. 78,000 (ರೂ. 18,000 ಅನ್ನು ಬೆಂಗಳೂರಿನಲ್ಲಿ ಸ್ವೀಕರಿಸಲಾಗಿದೆ)

    e) ಭಾರತೀಯ ಕಂಪನಿಯು ಪಾವತಿಸಿದ ಲಾಭಾಂಶವನ್ನು ಕೆನಡಾದಲ್ಲಿ ಸ್ವೀಕರಿಸುವುದು ರೂ. 56,000.

    f) ಹಿಂದಿನ ತೆರಿಗೆ ಹಾಕಿಲ್ಲದ ಲಾಭ ರೂ. 1,05,000 ಅನ್ನು ಆದಾಯ ವರ್ಷ 2008-09 ರಲ್ಲಿ ಭಾರತಕ್ಕೆ ತರಲಾಗಿದೆ.

    g) ಲಂಡನ್‌ನಿಂದ ನಿಯಂತ್ರಿಸಲ್ಪಡುತ್ತಿರುವ ಮೈಸೂರಿನಲ್ಲಿನ ವ್ಯಾಪಾರದಿಂದ ಬಂದ ಲಾಭ ರೂ. 72,000.

h) ಮಂಗಳೂರಿನ ಕಟ್ಟಡ ಮಾರಾಟದಿಂದ ಬಂದ ಲಾಭ ದುಬೈನಲ್ಲಿ ಸ್ವೀಕರಿಸಿರುವುದು ರೂ. 1,48,000.

i) ಭಾರತೀಯ ಕಂಪನಿಯಿಂದ ಲಂಡನ್‌ನಲ್ಲಿ ಸ್ವೀಕರಿಸಿದ ಪಿಂಚಣಿ ರೂ. 36,000.

j) ಸಂಬಂಧಿಕರೊಬ್ಬರಿಂದ ಭಾರತದಲ್ಲಿ ಸ್ವೀಕರಿಸಿದ ನಗದು ಉಡುಗೊರೆ ರೂ. 60,000.

ಶ್ರೀ ಕೃಷ್ಣಮೂರ್ತಿಯವರ ಸ್ಥೂಲ ಒಟ್ಟು ಆದಾಯ (GTI) ವನ್ನು ಅವರು

a) ನಿವಾಸಿಯಾಗಿದ್ದಾಗ ಮತ್ತು ಸಾಧಾರಣ ನಿವಾಸಿಯಾಗಿದ್ದಾಗ

b) ಸಾಧಾರಣವಾಗಿ ನಿವಾಸಿಯಲ್ಲದಿರುವಾಗ ಹಾಗೂ

c) ಅನಿವಾಸಿಯಾಗಿರುವಾಗ ಕರವರ್ಷ 2009-10 ಕ್ಕೆ ಕಂಡುಹಿಡಿಯಿರಿ.

11. ಪ್ರಭಾಕರ್ ಎಂಬುವವರು ಬೆಂಗಳೂರಿನ NSK Ltd., ಸಂಸ್ಥೆಯ ಉದ್ಯೋಗಿಯಾಗಿದ್ದಾರೆ. ಆದಾಯ ವರ್ಷ 2008-09 ಕ್ಕೆ ಸಂಬಂಧಿಸಿದಂತೆ ಅವರ ಆದಾಯ ವಿವರಗಳು ಕೆಳಕಂಡಂತೆ ಇವೆ:

ಮೂಲವೇತನ ಮಾಸಿಕ ರೂ. 13,500; ತುಟ್ಟಿಭತ್ಯೆ ಮೂಲವೇತನದ 35% (60% ನಷ್ಟು ನಿವೃತ್ತಿ ಸೌಲಭ್ಯಗಳಿಗೆ ಪರಿಗಣಿಸಲ್ಪಡುತ್ತದೆ); ಮನೆ ಬಾಡಿಗೆ ಭತ್ಯೆ ಮಾಸಿಕ ರೂ. 4,000 (ಬಾಡಿಗೆ ಪಾವತಿಸಿರುವುದು ಮಾಸಿಕ ರೂ. 5,000); ಮಕ್ಕಳ ವಿದ್ಯಾಭ್ಯಾಸ ಭತ್ಯೆ ಪ್ರತಿ ಮಗುವಿಗೆ ಮಾಸಿಕ ರೂ. 50 ರಂತೆ ಒಟ್ಟು ಮೂರು ಮಕ್ಕಳಿಗೆ; ಸಹಾಯಕನ ಭತ್ಯೆ ಮಾಸಿಕ ರೂ. 300 (ಖರ್ಚು ಮಾಡಿದ ಮೊತ್ತ ಮಾಸಿಕ ರೂ. 200); ಬೋನಸ್ ರೂ. 25,000; ಗಳಿಕೆ ರಜೆ ನಗದೀಕರಣ ರೂ. 13,500; ಏಪ್ರಿಲ್ 2009 ರ ಮುಂಗಡ ವೇತನ ರೂ. 14,000; ಮನರಂಜನಾ ಭತ್ಯೆ ಮಾಸಿಕ ರೂ. 250.

ಪ್ರಭಾಕರ್‌ರವರ ಕಛೇರಿ ಹಾಗೂ ವೈಯಕ್ತಿಕ ಕೆಲಸಗಳಿಗಾಗಿ ಒಂದು ಚಿಕ್ಕ ಕಾರನ್ನು ಮುಕ್ತವಾಗಿ ಬಳಸಲು ಒದಗಿಸಲಾಗಿದೆ. ಸಂಬಂಧಿಸಿದ ವರ್ಷದಲ್ಲಿ ಆರೋಗ್ಯ ಸಂಬಂಧಿ ಖರ್ಚುಗಳಿಗಾಗಿ ರೂ. 19,200 ಅನ್ನು ಮರುಪಾವತಿಸಲಾಗಿದೆ.

RPF ಗೆ ಆತನ ವೇತನದ 14% ಅನ್ನು ದೇಣಿಗೆಯಾಗಿ ನೀಡುತ್ತಿದ್ದು ಸಂಸ್ಥೆಯು ಅದೇ ಮೊತ್ತವನ್ನು ದೇಣಿಗೆಯಾಗಿ ಪಾವತಿಸುತ್ತಿದೆ. RPF ನ ಒಟ್ಟುಗೊಳಿಸಿದ ಮೊತ್ತದ ಮೇಲೆ ಸಂಸ್ಥೆಯು 12% ನಂತೆ ಜಮೆ ಮಾಡಿದ ಬಡ್ಡಿಯು ರೂ. 18,000 ಆಗಿದೆ.

ಅವರು ಪಾವತಿಸಿದ ವೃತ್ತಿ ತೆರಿಗೆ ಮಾಸಿಕ ರೂ. 200 ಆಗಿದೆ.

ಕರವರ್ಷ 2009-10 ಕ್ಕೆ ಪ್ರಭಾಕರ್‌ರವರ ವೇತನದ ಆದಾಯವನ್ನು ನಿಶ್ಚಯಿಸಿ.

12. ಶ್ರೀಮತಿ ರೇಖ, RKS Ltd., ದಿಲ್ಲಿಯ ಉದ್ಯೋಗಿ ಕೆಳಕಂಡ ಆದಾಯವನ್ನು ದಿನಾಂಕ 31-03-2009 ಕ್ಕೆ ಕೊನೆಗೊಂಡ ವರ್ಷದಲ್ಲಿ ಸ್ವೀಕರಿಸಿದ್ದಾರೆ.

ಮೂಲವೇತನ 31-08-2008 ರವರೆಗೆ ಮಾಸಿಕ ರೂ. 12,000 ಮತ್ತು ತದನಂತರ ಮಾಸಿಕ ರೂ. 12,500. ರಜೆ ಪ್ರಯಾಣ ರಿಯಾಯಿತಿ ರೂ. 4,500 (ಸಂಪೂರ್ಣ ಮೊತ್ತವು ಖರ್ಚಾಗಿದೆ). ತುಟ್ಟಿವೇತನ (DP) ರೂ. 30,000; ತುಟ್ಟಿಭತ್ಯೆ ರೂ. 15,000 (ಇದು ನಿವೃತ್ತಿ ಸೌಲಭ್ಯಗಳಿಗೆ ಸೇರ್ಪಡೆಯಾಗುವುದಿಲ್ಲ); ಮಕ್ಕಳ ವಿದ್ಯಾಭ್ಯಾಸ ಭತ್ಯೆ ಮಾಸಿಕ ರೂ. 250 ರಂತೆ ಒಂದು ಮಗುವಿಗೆ; ಆರೋಗ್ಯ ಸಂಬಂಧಿ ಖರ್ಚುಗಳಿಗಾಗಿ ಮರುಪಾವತಿಸಿಕೊಂಡ ಮೊತ್ತ ರೂ. 31,500 (ಖಾಸಗಿ ಆಸ್ಪತ್ರೆ).

ಶ್ರೀಮತಿ ರೇಖರವರಿಗೆ ದಿಲ್ಲಿಯಲ್ಲಿ ಬಾಡಿಗೆ ರಹಿತ ಮನೆ (ಸಂಸ್ಥೆಯು ಪಾವತಿಸಿದ ವಾರ್ಷಿಕ ಬಾಡಿಗೆ ರೂ. 80,000), ಒಬ್ಬ ವಾಚ್‌ಮ್ಯಾನ್ ಹಾಗೂ ಒಬ್ಬ ಅಡಿಗೆಯವನು (ಪ್ರತಿಯೊಬ್ಬನಿಗೂ ಮಾಸಿಕ ರೂ. 700 ವೇತನ ಪಾವತಿಸಲಾಗಿದೆ), ಗೃಹೋಪಕರಣಗಳ ಖರೀದಿಗಾಗಿ ಬಡ್ಡಿ ರಹಿತ ಸಾಲ ರೂ. 1,20,000 (ಸಾಲ ತೆಗೆದುಕೊಂಡ ದಿನಾಂಕ 01-04-08 ಮತ್ತು SBI ಬಡ್ಡಿ ದರ, ಇದೇ ರೀತಿಯ ಸಾಲಗಳಿಗೆ ದಿನಾಂಕ 01-04-2008 ರಲ್ಲಿ ವಾರ್ಷಿಕ 12%) ಒದಗಿಸಲಾಗಿದೆ.

ಶ್ರೀಮತಿ ರೇಖ ವೃತ್ತಿ ತೆರಿಗೆ ಮಾಸಿಕ ರೂ. 200 ಪಾವತಿಸುತ್ತಿದ್ದಾರೆಂದು ಭಾವಿಸಿ ಕರವರ್ಷ 2009-10 ಕ್ಕೆ ಆಕೆಯ ವೇತನ ಆದಾಯವನ್ನು ನಿಶ್ಚಯಿಸಿ.

13. ಶ್ರೀಮತಿ ಇಂದಿರ 4 ಮನೆಗಳ ಮಾಲೀಕತ್ವ ಹೊಂದಿದ್ದಾರೆ. ಮೊದಲನೇ ಮನೆಯನ್ನು ವ್ಯಾಪಾರದ ಉದ್ದೇಶಕ್ಕಾಗಿ ಬಾಡಿಗೆಗೆ ನೀಡಿದ್ದಾರೆ. ಎರಡನೇ ಮನೆಯನ್ನು ಸ್ವಂತ ವ್ಯಾಪಾರದ ಉದ್ದೇಶಕ್ಕಾಗಿ ಬಳಸಿಕೊಂಡಿದ್ದಾರೆ ಹಾಗೂ ಮೂರು ಮತ್ತು ನಾಲ್ಕನೇ ಮನೆಗಳನ್ನು ಸ್ವಂತ ವಾಸಕ್ಕಾಗಿ ಬಳಸಿಕೊಂಡಿದ್ದಾರೆ. ಆದಾಯ ವರ್ಷ 2008-09 ಕ್ಕೆ ಸಂಬಂಧಿಸಿದಂತೆ ಕೆಳಕಂಡ ವಿವರಗಳು ಲಭ್ಯವಿವೆ.

| ವಿವರಗಳು | ಮನೆ 1 | ಮನೆ 2 | ಮನೆ 3 | ಮನೆ 4 |
|---|---|---|---|---|
| ಪೌರಾಡಳಿತ ಮೌಲ್ಯ | 60,000 | 10,000 | 1,36,000 | 1,90,000 |
| ನಿಷ್ಪಕ್ಷಪಾತ ಬಾಡಿಗೆ ಮೌಲ್ಯ | 78,000 | 36,000 | 1,54,000 | 1,90,000 |
| ನಿಗದಿತ ಬಾಡಿಗೆ | 72,400 | 24,000 | 1,50,000 | 1,80,000 |
| ವಾರ್ಷಿಕ ಬಾಡಿಗೆ | 84,000 | – | – | – |
| ವಸೂಲಾಗಿಲ್ಲದ ಬಾಡಿಗೆ | 7,000 | – | – | – |
| ಪೌರಾಡಳಿತ ಕಂದಾಯ ಪಾವತಿ | | | | |
| – ಮಾಲೀಕರಿಂದ | 3,000 | 8,000 | 12,000 | 16,000 |
| – ಬಾಡಿಗೆದಾರರಿಂದ | 3,000 | – | – | – |
| ಕಟ್ಟಡ ಪೂರ್ಣಗೊಂಡ ದಿನಾಂಕ | 31-05-07 | 31-05-07 | 31-03-07 | 1-04-05 |

ಶ್ರೀಮತಿ ಇಂದಿರಾ ಕ್ರಮವಾಗಿ ರೂ. 6,00,000; ರೂ. 8,00,000 ಹಾಗೂ ರೂ. 13,00,000 ಸಾಲವನ್ನು ಮೊದಲನೇ, ಮೂರನೇ ಹಾಗೂ ನಾಲ್ಕನೇ ಮನೆಗಳ ನಿರ್ಮಾಣಕ್ಕಾಗಿ ತೆಗೆದುಕೊಂಡಿದ್ದಾರೆ. ಎಲ್ಲ ಸಾಲಗಳನ್ನು ಪಡೆದ ದಿನಾಂಕ ಜೂನ್ 16, 2003 ಮತ್ತು ಎಲ್ಲ ಸಾಲಗಳನ್ನು ಬಡ್ಡಿ ಸಹಿತ ಮರುಪಾವತಿ ಮಾಡಿದ ದಿನಾಂಕ 31-12-2007 ಆಗಿರುತ್ತದೆ. ಈ ಅವಧಿಯಲ್ಲಿ ಸಂಪೂರ್ಣ ಸಾಲದ ಮೊತ್ತವು ಬಾಕಿಯಿರುತ್ತಿತ್ತು. ಎಲ್ಲ ಸಾಲಗಳ ಮೇಲೂ ಬಡ್ಡಿದರ ವಾರ್ಷಿಕ 15%.

ಕರವರ್ಷ 2009-10 ಕ್ಕೆ ಶ್ರೀಮತಿ ಇಂದಿರಾರವರ ಮನೆ ಮೂಲದ ಆದಾಯವನ್ನು ನಿಶ್ಚಯಿಸಿ.

14. ಶ್ರೀಮತಿ ವೀಣಾರವರು ಬೇರೆ ಬೇರೆ ವಿಸ್ತೀರ್ಣದ ಎರಡು ಮನೆಗಳನ್ನು ಹೊಂದಿರುವ, ವಾಸಕ್ಕಾಗಿ ಸಂಪೂರ್ಣವಾಗಿ ಬಾಡಿಗೆಗೆ ನೀಡಿರುವ ಬೆಂಗಳೂರಿನ ಒಂದು ಕಟ್ಟಡದ ಮಾಲೀಕರಾಗಿದ್ದಾರೆ. ಆ ಮನೆಗಳನ್ನು ಕ್ರಮವಾಗಿ ಮಾಸಿಕ ರೂ. 5,000 ಹಾಗೂ ಮಾಸಿಕ ರೂ. 10,000 ಬಾಡಿಗೆಗೆ ನೀಡಲಾಗಿದೆ. ಇಡೀ ಕಟ್ಟಡದ ಪೌರಾಡಳಿತ ಮೌಲ್ಯ ರೂ. 1,50,000, ಪೌರಾಡಳಿತ ಕಂದಾಯ ದರ 10% ಇದ್ದು ಅದನ್ನು ಆಕೆ ಪಾವತಿಸಿದ್ದಾರೆ. ಈ ಕಟ್ಟಡದ ಇತರೆ ವಿವರಗಳು ಕೆಳಕಂಡಂತೆ ಇವೆ:

a) ಕಟ್ಟಡದ ನಿರ್ಮಾಣವು ದಿನಾಂಕ 10-01-2005ರಂದು ಪೂರ್ಣಗೊಂಡಿತು.

b) ದಿನಾಂಕ 1-4-2001ರಲ್ಲಿ ವಾರ್ಷಿಕ 12% ಬಡ್ಡಿದರದಲ್ಲಿ ರೂ. 1,00,000 ಸಾಲವನ್ನು ತೆಗೆದುಕೊಳ್ಳಲಾಗಿತ್ತು.

c) ಎರಡನೇ ಮನೆ ಆದಾಯ ವರ್ಷ 2008-09 ರಲ್ಲಿ ಎರಡು ತಿಂಗಳವರೆಗೆ ಬಾಡಿಗೆದಾರರಿಲ್ಲದೆ ಖಾಲಿಯಿತ್ತು.

d) ಸಂಪೂರ್ಣ ಸಾಲವನ್ನು ದಿನಾಂಕ 31-12-2008 ರಂದು ತೀರಿಸಲಾಯಿತು.

e) ದಿನಾಂಕ 1-4-2008 ರಿಂದ 31-12-2008 ರವರೆಗೆ ಸರಾಸರಿ ಸಾಲಬಾಕಿ ರೂ. 20,000 ಆಗಿತ್ತು.

ಕರವರ್ಷ 2009-10 ಕ್ಕೆ ಶ್ರೀಮತಿ ವೀಣಾರವರ ಮನೆ ಮೂಲದ ಆದಾಯವನ್ನು ನಿಶ್ಚಯಿಸಿ.